ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2019–20 ದಿನಾಂಕ: 21–12–2019

# ಪತ್ರಿಕಾ ಆಮಂತ್ರಣ

1. **ನೂತನ ಶಾಸಕರಿಗೆ ಪ್ರಮಾಣ ವಚನ:**

**ಪ್ರಮಾಣ ವಚನ ಬೋಧನೆ:**

***ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ***
**ಸಭಾಧ್ಯಕ್ಷರು,**
**ಕರ್ನಾಟಕ ವಿಧಾನಸಭೆ**

**ದಿನಾಂಕ: 22–12–2019, ಭಾನುವಾರ, ಸಮಯ – ಬೆಳಿಗ್ಗೆ 10.00 ಗಂಟೆಗೆ**

**ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಂಗಳೂರು.**

**ಪತ್ರಿಕಾಗೋಷ್ಠಿ**

2. **ಸರಕು ಮತ್ತು ಸೇವಾ ತೆರಿಗೆಗೆ ಸಂಬಂಧಿಸಿದಂತೆ**

**The 13th Group of Ministers meeting on IT implementation in GST**

**ಅಧ್ಯಕ್ಷತೆ:**

**ಶ್ರೀಯುತ ಸುಶೀಲ್ ಕುಮಾರ್ ಮೋದಿ**
**ಬಿಹಾರ ರಾಜ್ಯದ ಉಪ ಮುಖ್ಯಮಂತ್ರಿ. ಹಾಗೂ ಅಧ್ಯಕ್ಷರು ಜಿಎಸ್‌ಟಿ ಮಂಡಳಿ**

**ದಿನಾಂಕ: 23–12–2019 ಸೋಮವಾರ ಸಮಯ ಬೆಳಿಗ್ಗೆ 11.30 ಗಂಟೆಗೆ**

**ಸ್ಥಳ: ITC Windsor, West Minister Banquet Hall, Sankey road Bengaluru**

**<u>ಪತ್ರಿಕಾಗೋಷ್ಠಿ:</u>**

3. ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ
ಶ್ರೀ ರಾಮದಾಸ್ ಅಥ್ವಾಲೆ,
ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣದ ರಾಜ್ಯ ಸಚಿವರು.

**ದಿನಾಂಕ: 23–12–2019 ಸೋಮವಾರ ಸಮಯ: ಮಧ್ಯಾಹ್ನ 2.30 ಗಂಟೆಗೆ**

**ಸ್ಥಳ: ಕುಮಾರಕೃಪಾ ಅತಿಥಿ ಗೃಹ, ಕುಮಾರಕೃಪಾ ರಸ್ತೆ, ಬೆಂಗಳೂರು.**

ಪತ್ರಿಕಾ ಪ್ರಕಟಣೆ

## <u>ವಿಶೇಷ ಸೇವೆ ಸಲ್ಲಿಸಿರುವ ಅರಣ್ಯ ಇಲಾಖೆ ನೌಕರರಿಗೆ</u>
## <u>ಬಿ. ಮಾರಪ್ಪ ಸ್ಮಾರಕ ಟ್ರಸ್ಟ್ ಪ್ರಶಸ್ತಿ ಪ್ರದಾನ</u>

ಬೆಂಗಳೂರು, ಡಿಸೆಂಬರ್ 21 (ಕರ್ನಾಟಕ ವಾರ್ತೆ)

ತಮ್ಮ ಪ್ರಾಣದ ಹಂಗನ್ನು ತೊರೆದು ಸಂಕಷ್ಟ ಪರಿಸ್ಥಿತಿಯಲ್ಲಿ ಕೆಲಸ ನಿರ್ವಹಿಸಿ ಸಾಧನೆಗೈದ ಅರಣ್ಯ ಇಲಾಖೆ ಸಿಬ್ಬಂದಿಗಳಿಗೆ ಪುರಸ್ಕರಿಸುತ್ತಿರುವುದು ನನಗೆ ಹೆಮ್ಮೆ ತಂದಿದೆ ಎಂದು ಅರಣ್ಯ, ಪರಿಸರ ಮತ್ತು ಜೀವಿಪರಿಸ್ಥಿತಿ ಸಚಿವರಾದ ಶ್ರೀ ಸಿ.ಸಿ. ಪಾಟೀಲ್ ತಿಳಿಸಿದರು.

ಅವರು ಇಂದು ಮಲ್ಲೇಶ್ವರಂನಲ್ಲಿನ ಅರಣ್ಯ ಭವನದಲ್ಲಿ ಬಿ. ಮಾರಪ್ಪ ಸ್ಮಾರಕ ಟ್ರಸ್ಟ್, ಅರಣ್ಯ ಇಲಾಖೆ ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾದ ವನ್ಯಜೀವಿ ಹಾಗೂ ಅರಣ್ಯ ಸಂರಕ್ಷಣೆಯಲ್ಲಿ ವಿಶೇಷ ಸೇವೆ ಸಲ್ಲಿಸಿರುವ ಅರಣ್ಯ ಇಲಾಖೆ ನೌಕರರಿಗೆ ಮಾರಕ ಸ್ಮಾರಕ ಪ್ರಶಸ್ತಿ ಪ್ರದಾನ ಸಮಾರಂಭ – 2019 ರಲ್ಲಿ ಪ್ರಶಸ್ತಿ ನೀಡಿ ಮಾತನಾಡಿದರು.

ನಾಳಿನ ಉಳಿವಿಗಾಗಿ ನಾವು ಪರಿಸರ ಹಾಗೂ ಕಾಡನ್ನು ಸಂರಕ್ಷಿಸಬೇಕು. ಕಾಡು ನಾಶವಾದರೆ ಮಾನವ ಸಂಕುಲಕ್ಕೆ ಕಷ್ಟ ಬಂದೊದಗುತ್ತದೆ. ದೈನಂದಿನ ವಸ್ತುಗಳ ಬೆಲೆ ಏರಿಕೆಯಾಗಿ ಹವಾಮಾನ ವೈಪ್ಯಾರೀತವಾಗುತ್ತದೆ ಎಂದರು. ಇದುವರೆಗೆ 150 ಜನರಿಗೆ ಮಾರಪ್ಪ ಪ್ರಶಸ್ತಿಯನ್ನು ನೀಡಲಾಗಿದ್ದು, ಮುಂಬರುವ ವರ್ಷದಿಂದ ಅದ್ವಿತೀಯ ಸಾಧನೆ ಗೈದ ಅರಣ್ಯ ಅಧಿಕಾರಿಗಳಿಗೆ ಚಿನ್ನದ ಪದಕವನ್ನು ಸಹ ನೀಡಿ ಗೌರವಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅರಣ್ಯ ಪಡೆ ಮುಖ್ಯಸ್ಥರಾದ ಶ್ರೀಧರ್ ಪುನಾಟಿ ಅವರು ಮಾತನಾಡಿ ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಮುಖ್ಯಸ್ಥರು ಇತರರಿಗೆ ಸ್ಫೂರ್ತಿಯಾಗಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆವಹಿಸಿ ಮಾತನಾಡಿದ ಮಾರಪ್ಪ ಸ್ಮಾರಕ ಟ್ರಸ್ಟ್‌ನ ಅಧ್ಯಕ್ಷರಾದ ಆರ್.ಎಂ. ಪಾಲಣ್ಣ ಅವರು ಮಾತನಾಡಿ ಅರಣ್ಯ ಸಿಬ್ಬಂದಿಗೆ ವಿಶೇಷ ಭ್ಯತೆಯನ್ನು ಸರ್ಕಾರ ನೀಡುವುದರ ಜೊತೆಗೆ ಅವರಿಗೆ ಕಾನೂನು ತೊಡಕು ಇಲ್ಲದೆ ಕೆಲಸ ನಿರ್ವಹಿಸಲು ಅವಕಾಶ ನೀಡಬೇಕು ಎಂದರು.

ಬಿ. ಮಾರಪ್ಪ ಟ್ರಸ್ಟ್ – 2019 ನೇ ಸಾಲಿನ ಪ್ರಶಸ್ತಿಯನ್ನು ಬಿ. ಸಂತೋಷ್, ಉಪ ವಲಯ ಅರಣ್ಯಾಧಿಕಾರಿ, ಹಳಿಯಾಳ ವಿಭಾಗ, ಕೆನರಾ ವೃತ್ತ, ಹಜರತ್ ಸಾಬ ಗೌಸಖಾನ ಕುಂದುಗೋಳ, ಉಪ ವಲಯ ಅರಣ್ಯಾಧಿಕಾರಿ, ಕಾರವಾರ ವಿಭಾಗ, ಕೆನರಾ ವೃತ್ತ, ಎಸ್.ಸಿ. ನವೀನ್‌ಕುಮಾರ್, ಉಪ ವಲಯ ಅರಣ್ಯಾಧಿಕಾರಿ, ಬೆಂಗಳೂರು ನಗರ ವಿಭಾಗ, ಶಶಿ ಪಿ.ಟಿ, ಉಪ ವಲಯ ಅರಣ್ಯಾಧಿಕಾರಿ, ಮಡಿಕೇರಿ ವಿಭಾಗ ಕೊಡುಗು ವೃತ್ತ, ಚರಣ್‌ಕುಮಾರ್, ಉಪವಲಯ ಅರಣ್ಯಾಧಿಕಾರಿ, ಸಕಲೇಶಪುರ, ಸೋಮಶೇಖರ್ ಬಿ. ಪಾವಟೆ, ಉಪವಲಯ ಸಂರಕ್ಷಣಾಧಿಕಾರಿ ಬೆಳಗಾವಿ ವೃತ್ತ, ಷಣ್ಮುಖ ಯು. ಉಪವಲಯ ಅರಣಾಧಿಕಾರಿ, ಭದ್ರಾ ವನ್ಯಜೀವಿ ವಿಭಾಗ, ಚಿಕ್ಕಮಗಳೂರು ವೃತ್ತ, ನಯನಕುಮಾರಿ, ಹೆಚ್.ಎ. ಅರಣ್ಯ ರಕ್ಷಕರು, ಹೊನ್ನವರ ವಿಭಾಗ, ಕೆನರಾ ವೃತ್ತ, ಎಂ.ಡಿ. ಅಯ್ಯಪ್ಪ, ಅರಣ್ಯ ಸಂರಕ್ಷಕರು, ಮೈಸೂರು ವನ್ಯಜೀವಿ ವಿಭಾಗ. ಶರತ್ ಶೆಟ್ಟಿ ಕೆ, ಅರಣ್ಯ ರಕ್ಷಕರು, ಮಂಗಳೂರು ವಿಭಾಗ, ಚೌಡಪ್ಪನಾಯ್ಕ ವಿ. ಜಿಡ್ಡಿಮನಿ, ಅರಣ್ಯ ರಕ್ಷಕರು, ವಿರಾಜಪೇಟೆ ವಿಭಾಗ, ಕೊಡಗು ವೃತ್ತ. ಅಬ್ದುಲ್ ಮುಜೀಬ್, ಅರಣ್ಯ ರಕ್ಷಕರು, ಕೊಳ್ಳೇಗಾಲ ವಿಭಾಗ ಚಾಮರಾಜನಗರ ವೃತ್ತ, ಪಾಪಣ್ಣ ಸಣ್ಣಬೋರಯ್ಯ, ಅರಣ್ಯ ವೀಕ್ಷಕರು, ಬಳ್ಳಾರಿ ವಿಭಾಗ, ಸಂಜೀವ ಮಾರುತಿ ಅಸ್ನೋಟಿಕರ್, ಅರಣ್ಯ ವೀಕ್ಷಕರು, ಕಾರವಾರ ವಿಭಾಗ, ಕೆನರಾ ವೃತ್ತ, ಜಟ್ಟಿ ತಿಪ್ಪಯ್ಯ ನಾಯ್ಕ್, ಕ್ಷೇಮಾಭಿವೃದ್ಧಿ ಕಾವಲುಗಾರ, ಹೊನ್ನವಾರ ವಿಭಾಗ, ಕೆನರಾ ವೃತ್ತ, ಮಹಾದೇವ ಎಂ. ಮಡ್ಡಿ, ಉಪವಲಯ ಅರಣ್ಯಾಧಿಕಾರಿ, ಹೊನ್ನವಾರ ವಿಭಾಗ, ಕೆನರಾ ವೃತ್ತ ಇವರುಗಳಿಗೆ ನೀಡಿ ಗೌರವಿಸಲಾಯಿತು. ಪುರಸ್ಕೃತರಿಗೆ ಪ್ರಶಸ್ತಿ ಫಲಕದ ಜೊತೆಗೆ ತಲಾ ರೂ 10,000 ನಗದು ಸಹ ಸೇರಿದೆ.

ಇದೇ ಸಂದರ್ಭದಲ್ಲಿ " ಕೃಷಿವನ " ತ್ರೈಮಾಸಿಕ ವಾರ ಪತ್ರಿಕೆಯನ್ನು ಬಿಡುಗಡೆಗೊಳಿಸಲಾಯಿತು.

ಕಾರ್ಯಕ್ರಮದಲ್ಲಿ ಅರಣ್ಯ, ಪರಿಸರ ಹಾಗೂ ಜೀವಿ ಪರಿಸ್ಥಿತಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಾದ ಸಂದೀಪ್ ದವೆ ಹಾಗೂ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಾದ ಅಜಯ್ ಮಿಶ್ರಾ ಸೇರಿದಂತೆ ಇಲಾಖೆಯ ಹಿರಿಯ ಹಾಗೂ ನಿವೃತ್ತ ಅಧಿಕಾರಿಗಳು ಉಪಸ್ಥಿತರಿದ್ದರು.

## ಅವಧಿ ವಿಸ್ತರಣೆ

**ಬೆಂಗಳೂರು, ಡಿಸೆಂಬರ್ 21 (ಕರ್ನಾಟಕ ವಾರ್ತೆ)**

ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಇತರೆ ಪರೀಕ್ಷೆಗಳ ವಿಭಾಗದಿಂದ ಜನವರಿ – 2020 ರ ಮಾಹೆಯಲ್ಲಿ ನಡೆಯುವ ವಾಣಿಜ್ಯ ಪರೀಕ್ಷೆಗೆ ವಾಣಿಜ್ಯ ಶಾಲೆಗಳ ನೋಂದಣಿಗೆ ಹಾಗೂ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 24–12–2019.

ಪರೀಕ್ಷಾ ಶುಲ್ಕವನ್ನು ನೆಫ್ಟ್ ಮೂಲಕ ಬ್ಯಾಂಕ್‌ನಲ್ಲಿ ಜಮಾ ಮಾಡಲು ದಿನಾಂಕ: 27–12–2019 ರವರೆಗೆ ವಿಸ್ತರಿಸಲಾಗಿದೆ. ಸಂಬಂಧಪಟ್ಟವರು ಇದರ ಸದುಪಯೋಗವನ್ನು ಪಡೆಯುವಂತೆ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಕೋರಿದೆ.

## ಸಚಿವರ ಪ್ರವಾಸ

**ಬೆಂಗಳೂರು, ಡಿಸೆಂಬರ್ 21 (ಕರ್ನಾಟಕ ವಾರ್ತೆ)**

ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಹಾಗೂ ಮಾಜಿ ಮುಖ್ಯಮಂತ್ರಿಗಳು ಆದ ಜಗದೀಶ್ ಶೆಟ್ಟರ್ ಅವರು ಡಿಸೆಂಬರ್ 22 ರಿಂದ 24 ರವರೆಗೆ ಮಹಾರಾಷ್ಟ್ರದಲ್ಲಿ ಪ್ರವಾಸ ಕೈಗೊಂಡು, ಡಿಸೆಂಬರ್ 24 ರಂದು ಕೇಂದ್ರಸ್ಥಾನಕ್ಕೆ ಹಿಂದಿರುಗಲಿದ್ದಾರೆ.

## ಅವಧಿ ಮೀರಿದ ಗ್ರಾಹಕ ವ್ಯಾಜ್ಯಗಳ ಕಡತ ಹಾಗೂ ನಾಶಗೊಳಿಸುವ ಕುರಿತು

**ಬೆಂಗಳೂರು, ಡಿಸೆಂಬರ್ 21 (ಕರ್ನಾಟಕ ವಾರ್ತೆ)**

ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ದಿನಾಂಕ: 14–11–2019 ರ ರಾಜ್ಯ ಗ್ರಾಹಕರ ವ್ಯಾಜ್ಯಗಳ ಆಯೋಗದ ಸುತ್ತೋಲೆ ದಿನಾಂಕ: 13–11–2019 ರಂತೆ 1989 ರಿಂದ 2000 ರವರೆಗಿನ ಸಾಲಿನಲ್ಲಿ ದಾಖಲಾಗಿ ವಿಲೇವಾರಿಯಾಗಿದ್ದ ಮೂಲ ದೂರುಗಳು, ಮೇಲ್ಮನವಿಗಳು ಜಾರಿ ಅರ್ಜಿಗಳು, ಹಾಗೂ ಇತರೆ ವಿಲೇಯಾದ ಪ್ರಕರಣಗಳ ಕಡತದಲ್ಲಿ ಷಕ್ಷಕಾರರು ಹಾಜರುಪಡಿಸಿದ ದಾಖಲೆಗಳು ಯಾವುದಾದರೂ ಇದ್ದಲ್ಲಿ ಅಧಿಸೂಚನೆ ಹೊರಿಡಿದ ಒಂದು ತಿಂಗಳೊಳಗ ವಾಪಸ್ಸು ತೆಗೆದುಕೊಳ್ಳುವಂತೆ ಸೂಚಿಸಿ ಆಯೋಗದ ಕಚೇರಿಯ ಸೂಚನಾ ಫಲಕ ಹಾಗೂ ಇತರ ಪ್ರಮುಖ ಸ್ಥಳಗಳಲ್ಲಿ ಪ್ರಕಟಿಸಲಾಗಿತ್ತು. ಅದರಂತೆ ಒಂದು ತಿಂಗಳ ಅವಧಿ ದಿನಾಂಕ: 16–12–2019 ಕ್ಕೆ ಪೂರ್ಣಗೊಂಡಿದ್ದು,

ಆಯೋಗದ ಕಚೇರಿ ಆಡಳಿತ ವಿಭಾಗವು ಮೇಲ್ಕಂಡ ಅವಧಿಯ ಕಡತಗಳನ್ನು ಗ್ರಾಹಕ ಸಂರಕ್ಷಣ ರೆಗ್ಯುಲೇಷನ್ 20 ರ ರೀತ್ಯಾ ವಿಲೇ ಪಡಿಸಲು ಕ್ರಮಗೊಂಡಿದೆ ಎಂದು ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಪ್ರಕಟಣೆ ತಿಳಿಸಿದೆ